ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಸಚಿವರು ಚಿಕ್ಕಮಗಳೂರಲ್ಲಿ ವಿಜ್ಞಾನ ಕಾಲೇಜು ಇಲ್ಲ ಎಂದು ಹೇಳಿದ್ದಾರೆ. ಹಾಗೇನಾದರೂ ಆ ಕಾಲೇಜನ್ನು ವಾಪಸ್ಸು ಪಡೆದಿದ್ದಾರೆಯೆ?

ಶ್ರೀ ಜೀವರಾಜ ಆಳ್ವ.—ಹಾಗಿ ವಾಪಸ್ಸು ಪಡೆದುಕೊಂಡಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಚಿಕ್ಕಮಗಳೂರಿನಲ್ಲಿ ವಿಜ್ಞಾನ ಕಾಲೇಜು ಇದೆ.

ಶ್ರೀ ಜೀವರಾಜ ಆಳ್ವ.—ಇದ್ದರೆ ಅದನ್ನು ಖಂಡಿತಾ ವಾಪಸ್ಸು ತೆಗೆದುಕೊಳ್ಳುವುದಿಲ್ಲ.

ಸರ್ಕಾರದ ನೂತನ ಶಿಕ್ಷಣ ನೀತಿ

೧೧೦೬. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು). —ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿಯ ಬಗ್ಗೆ ರಾಜ್ಯ ಸರ್ಕಾರದ ನಿಲುವೇನು?

ಆ) ಇದರ ಜಾರಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ನೂತನ ಶಿಕ್ಷಣ ಜಾರಿಗಾಗಿ ಮೀಸಲಾಗಿಟ್ಟಿರುವ ಹಣ ಮತ್ತು ಖರ್ಚಾದ ಹಣವೆಷ್ಟು?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ತತ್ವಶಃ ಒಪ್ಪಿಕೊಂಡಿದೆ.

ಆ) ಇದರಡಿಯಲ್ಲಿ ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ ವೃತ್ತಿ ಶಿಕ್ಷಣ, ವಿಜ್ಞಾನ ಶಿಕ್ಷಣ ಇತ್ಯಾದಿ ಬಗ್ಗೆ ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಕೇಂದ್ರ ಸರ್ಕಾರವು ನೀಡುವ ಹಣ ಸಹಾಯಕ್ಕಾಗಿ ಪ್ರಸ್ತಾವನೆ ಕಳುಹಿಸಲಾಗಿದೆ.

ಇ) ಕೇಂದ್ರ ಧನ ಸಹಾಯ ನಿರೀಕ್ಷಿಸಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರದಲ್ಲಿ ಕೇಂದ್ರ ಸರಕಾರದ ಹೊಸ ಶಿಕ್ಷಣ ನೀತಿಯನ್ನು ತತ್ವಶಃ ಒಪ್ಪಿಕೊಂಡಿದೆ ಎಂದು ಹೇಳಿದ್ದಾರೆ. ಈ ಹೊಸ ನೀತಿಯಲ್ಲಿ ಯಾವ ಯಾವ ತತ್ವಗಳು ಅಡಕವಾಗಿವೆ ? ಅದರಲ್ಲಿ ನೀವು ಒಪ್ಪಿಕೊಂಡಿರುವವಗಳು ಯಾವುವು ? ಒಪ್ಪಿಕೊಳ್ಳದಿರುವುದು ಯಾವುವು ? ಇದರಲ್ಲಿ ಫಾರ್ಮಲ್ ಎಜುಕೇಶನ್‌ನನ್ನು ಸಂಪೂರ್ಣವಾಗಿ ಬಿಟ್ಟು, ಟಿ. ವಿ.ಯಲ್ಲಿ ನೋಡಿ ಎಜುಕೇಶನ್ ಪಡೆಯಿರಿ ಎಂಬ ನೀತಿ ಏನಾದರೂ ಇದೆಯೋ, ಅಥವಾ ನವೋದಯ ಸ್ಕೂಲ್ಸ್ ಪ್ರಕಾರ ಜಿಲ್ಲೆಗೆ ೬೦ ಜನರಿಗೆ ಮಾತ್ರ ಕೊಡುವ ಒಂದು ರೀತಿಯನ್ನು ಅಥವಾ ತತ್ವವನ್ನು ಇಟ್ಟುಕೊಂಡಿದ್ದಾರೋ ಎಂದು ಹೇಳಬೇಕು. ಆ ನೀತಿಯಲ್ಲಿ ನೀವು ಒಪ್ಪಿಕೊಂಡಿರುವ ಮತ್ತು ಬಿಟ್ಟಿರುವ ತತ್ವಗಳನ್ನು ಹೇಳಬೇಕು.

SRI B. SOMASEKHAR.—In principle we have agreed to implement the New Education Policy. ನಾವು ಸುಮಾರು ಏಳು ಯೋಜನೆಗಳ ಪ್ರಸ್ತಾವನೆಯನ್ನು ಕೇಂದ್ರಸರಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಅದರ ಮಂಜೂರಾತಿಗಾಗಿ ಕೇಂದ್ರ ಸರಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಇವೊತ್ತಿನ ದಿನಪತ್ರಿಕೆಯಲ್ಲಿ ಆಟಾನಮಿ ಏನಿದೆ ಅದರ ಬಗ್ಗೆ ನೀವು ಏನು ಹೇಳುತ್ತೀರಿ ? ಹೀಗೆ ವಿದ್ಯಾರ್ಥಿಗಳನ್ನು ಮತ್ತು ಉಪಾಧ್ಯಾಯರನ್ನು ನೀವೆ ಶೋಷಣೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟ ಹಾಗೆ ಆಗುವುದಿಲ್ಲವೆ ? ಇಂಥ ತತ್ವಗಳ ಬಗ್ಗೆ ನೀವು ಏನು ಹೇಳುತ್ತೀರಿ ?

ಫಾರ್ಮಲ್ ಎಜುಕೇಷನ್ ಬೇಡ ಎಂದು ಹೇಳುತ್ತೀರಾ ? ಇನ್ ಫಾರ್ಮಲ್ ಎಜುಕೇಷನ್‌ನ್ನು ತಾವು ಒಪ್ಪಿಕೊಳ್ಳುತ್ತೀರಾ ? ಇದು ನ್ಯೂ ಎಜುಕೇಷನ್ ಪಾಲಿಸಿ. ಇದಕ್ಕೆ ತಾವು ಏನು ಹೇಳುತ್ತೀರಿ? ಈ ತತ್ವವನ್ನು ಏನು ಒಪ್ಪಿಕೊಂಡಿದ್ದೀರಿ. ಯಾವ್ಯಾವುದಕ್ಕೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆ. ಆಟಾನಮಿ, ಬ್ಲಾಕ್‌ಬೋರ್ಡ್, ನವೋದಯ ಎಂದು ಈ ಮೂರು ಕಾನ್‌ಸೆಪ್ಟ್‌ಗಳು ಇದೆಯಲ್ಲಾ ಇದರಲ್ಲಿ ಯಾವ್ಯಾವುದಕ್ಕೆ ಎಷ್ಟು ಎಷ್ಟು ಹಣವನ್ನು ಕೊಡಿ ಎಂದು ಕೇಳಿದ್ದೀರಿ.

ಶ್ರೀ ಬಿ. ಸೋಮಶೇಖರ್.—ಯಾವುದ್ಯಾವುದಕ್ಕೆ ಎಷ್ಟೆಷ್ಟು ಹಣ ಎಂದು ನಿಗದಿಪಡಿಸಿದ್ದಾರೋ ಅದಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ನಮಗೆ ಎಷ್ಟು ಮಂಜೂರಾಗುತ್ತದೆಯೋ ಅಷ್ಟನ್ನು ತೆಗೆದುಕೊಳ್ಳುತ್ತೇವೆ. ನಂತರ ಫಾರ್ಮಲ್ ಎಜುಕೇಷನ್ ಎಲ್ಲಿ ಕೊಡಬೇಕು ಮತ್ತು ಇನ್‌ಫಾರ್ಮಲ್ ಎಜುಕೇಷನನ್ನು ಎಲ್ಲಿ ಕೊಡಬೇಕೆಂದು ನಾವು ತೀರ್ಮಾನ ಮಾಡುತ್ತೇವೆ. ಎಲ್ಲಾ ಕಡೆಯಲ್ಲೂ ಒಂದೇ ತರಹದ ಶಿಕ್ಷಣವನ್ನು ನಾವು ಕೊಡುವುದಿಲ್ಲ. ಮಾನ್ಯ ಸದಸ್ಯರು ಅದರ ಬಗ್ಗೆ ತಮ್ಮ ಅನುಮಾನವನ್ನು ವ್ಯಕ್ತಪಡಿಸಬೇಕಾಗಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನೀವು ಇನ್‌ಫಾರ್ಮಲ್ ಎಜುಕೇಷನನ್ನು ಏನು ಮಾಡುತ್ತೀರಿ, ಫಾರ್ಮಲ್‌ನಲ್ಲಿ ವಿದ್ಯಾರ್ಥಿಗೆ ಪಾಠಶಾಲೆಯಲ್ಲಿಯೇ ಉಪಾಧ್ಯಾಯರು ಪಾಠ ಹೇಳಿ ಕೊಟ್ಟರೂ ಸರಿಯಾಗಿ ಕಲಿಯುವುದಿಲ್ಲ. ನೀವು ಇನ್-ಫಾರ್ಮಲ್ ಎಜುಕೇಷನನ್ನು ತರುವುದಕ್ಕೆ ಒಪ್ಪುತ್ತೀರಾ ? ಇದರಿಂದ ಬಡ ವಿದ್ಯಾರ್ಥಿಗಳಿಗೂ ಕೂಡಾ ತೊಂದರೆಯಾಗುತ್ತದೆ. ಇದು ತಮಗೆ ಗೊತ್ತಿಲ್ಲವೇ ? ಈ ತತ್ವಗಳನ್ನು ಸತ್ವಶಃ ಒಪ್ಪಿಕೊಂಡಿರುವ ಆ ತತ್ವಗಳು ಏನು ?

ಶ್ರೀ ಬಿ. ಸೋಮಶೇಖರ್.—ಅಧ್ಯಕ್ಷರೇ, ಸಂಪೂರ್ಣವಾಗಿ ಇದನ್ನು ತೆಗೆದುಹಾಕಿಲ್ಲ. ಈ ಫಾರ್ಮಲ್ ಎಜುಕೇಷನನ್ನು ಬಲಪಡಿಸುತ್ತೇವೆ. ಇದನ್ನು ಸಂಪೂರ್ಣವಾಗಿ ತೆಗೆದುಹಾಕುತ್ತೇವೆ ಎಂದು ಹೇಳುವುದು ತಪ್ಪು. ಇದನ್ನು ಬಲಪಡಿಸುತ್ತೇವೆ.

ಖಾಸಗೀ ಪಾಲಿಟೆಕ್ನಿಕ್‌ಗಳ ಗುಣಮಟ್ಟ

೧೨೧೮. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲು ಪೇಟೆ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಖಾಸಗಿ ಪಾಲಿಟೆಕ್ನಿಕ್‌ಗಳ ಗುಣಮಟ್ಟವನ್ನು ಪರೀಕ್ಷೆ ಮಾಡುವುದಕ್ಕೆ ಡಾ. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಸರ್ಕಾರದವರು ಸಮಿತಿಯೊಂದನ್ನು ನೇಮಕ ಮಾಡಿದ್ದು ನಿಜವೇ ?

ಆ) ಹಾಗಿದ್ದಲ್ಲಿ ಸದರಿ ಸಮಿತಿಯು ಸರ್ಕಾರದವರಿಗೆ ತನ್ನ ವರದಿಯನ್ನು ಸಲ್ಲಿಸಿದ್ದಾರೆಯೇ ? ಹಾಗೂ ಎಷ್ಟು ಪಾಲಿಟೆಕ್ನಿಕ್‌ಗಳು ಸರ್ಕಾರದ ನಿಯಮದಂತೆ ಗುಣಮಟ್ಟವನ್ನು ಹೊಂದಿಲ್ಲವೆಂದು ವರದಿಯಲ್ಲಿ ತಿಳಿಸಿದ್ದಾರೆ ? (ಅವುಗಳ ಹೆಸರು ಮತ್ತು ವಿಳಾಸದ ವಿವರ ತಿಳಿಸುವುದು).

ಇ) ಸದರಿ ವರದಿಯಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ನಿಜ.

ಆ) ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸಮಿತಿಯು ೧೨೫ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಪರಿಶೀಲಿಸಿ ಸರ್ಕಾರದ ನಿಯಮದಂತೆ ಗುಣಮಟ್ಟವನ್ನು ಹೊಂದಿಲ್ಲವೆಂದು ೨೬ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಮುಚ್ಚಲು ಹಾಗೂ ೨೨ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ಕೆಲವು ಕೋರ್ಸ್‌ಗಳನ್ನು ರದ್ದುಪಡಿಸಲು ಶಿಫಾರಸ್ಸು ಮಾಡಿದೆ. ಈ ಪಾಲಿಟೆಕ್ನಿಕ್‌ಗಳ ಹೆಸರುಗಳನ್ನು ಮತ್ತು ವಿಳಾಸಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

ಇ) ಸರ್ಕಾರವು ತಜ್ಞರ ಸಮಿತಿಯ ವರದಿಯನ್ನು ತಾತ್ವಿಕವಾಗಿ ಒಪ್ಪಿದೆ. ೨೬ ಪಾಲಿಟೆಕ್ನಿಕ್‌ಗಳನ್ನು ಮುಚ್ಚಲು ಹಾಗೂ ೨೨ ಪಾಲಿಟೆಕ್ನಿಕ್‌ಗಳಲ್ಲಿನ ಕೋರ್ಸುಗಳನ್ನು ತೆಗೆದುಹಾಕುವ ಬಗ್ಗೆ ಸಮಿತಿಯು ಮಾಡಿರುವ ಶಿಫಾರಸ್ಸಿನ ಬಗ್ಗೆ ಸದರಿ ಆಡಳಿತ ಮಂಡಳಿಯವರಿಗೆ ಸೂಕ್ತ ಅವಕಾಶ ನೀಡಿ ಅವರ ಹೇಳಿಕೆ ಪಡೆಯಲು ಶೋಕಾಸ್ ನೋಟಿಸುಗಳನ್ನು ಜಾರಿ ಮಾಡಲಾಗಿದೆ. ಸಮಿತಿಯು ಮಾಡಿರುವ ಇತರ ಶಿಫಾರಸ್ಸುಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.